**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

**ಕರಾಸಾ:ಕೇಕ:ಕಾರ್ಮಿಕ: 443 :2020-21** **ದಿನಾಂಕ.17.03.2021.**

ಎಲ್ಲಾ ಹಿರಿಯ/ ವಿಭಾಗನಿಯಂತ್ರಣಾಧಿಕಾರಿಗಳು
ಕರಾರಸಾನಿಗಮ
ಕಾರ್ಯ ವ್ಯವಸ್ಥಾಪಕರು,
ಪ್ರಾದೇಶಿಕ ಕಾರ್ಯಾಗಾರ, ಬೆಂಗಳೂರು, ಹಾಸನ.

ವಿಷಯ: ಸಾರಿಗೆ ನಿಗಮದ ಕಾರ್ಮಿಕರ ಬೇಡಿಕೆಗಳ ಕುರಿತು ತೆಗೆದುಕೊಂಡಿರುವ ಕ್ರಮ ಮತ್ತು ಸರ್ಕಾರದಿಂದ ಹೊರಡಿಸಿರುವ ಆದೇಶಗಳ ಮಾಹಿತಿಯನ್ನು ಎಲ್ಲಾ ನೌಕರರ ಗಮನಕ್ಕೆ ತರುವುದು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ ಟಿಡಿ 45 ಟಿಸಿಎಸ್ 2020 ದಿನಾಂಕ.15.12.2020.

****

ದಿನಾಂಕ.13.12.2020 ರಂದು ಸನ್ಮಾನ್ಯ ಉಪಮುಖ್ಯಮಂತ್ರಿಗಳು ಮತ್ತು ಸಾರಿಗೆ ಸಚಿವರ ಅಧ್ಯಕ್ಷತೆಯಲ್ಲಿ ನೌಕರರೊಂದಿಗೆ ನಡೆದ ಸಂಧಾನ ಸಭೆಯಲ್ಲಿ ಚರ್ಚಿಸಿದ 9 ಬೇಡಿಕೆಗಳ ಕುರಿತು ಪರಿಶೀಲಿಸಿ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸುವ ಸಲುವಾಗಿ ಉಲ್ಲೇಖಿತ ಸರ್ಕಾರಿ ಆದೇಶದನ್ವಯ ವ್ಯವಸ್ಥಾಪಕ ನಿರ್ದೇಶಕರು ಕರಾರಸಾನಿಗಮ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ನೀಡಿರುವ ವರದಿಯ ಮೇರೆಗೆ 8 ಬೇಡಿಕೆಗಳನ್ನು ಸರ್ಕಾರವು ಪೂರಕವಾಗಿ ಪರಿಗಣಿಸಿ, ಹೊರಡಿಸಿರುವ ಆದೇಶಗಳು ಮತ್ತು ತೆಗೆದುಕೊಂಡಿರುವ ಆಡಳಿತಾತ್ಮಕ ಕ್ರಮಗಳ ಸಂಕ್ಷಿಪ್ತ ಮಾಹಿತಿಯನ್ನು ಒಳಗೊಂಡ ಪಟ್ಟಿಯನ್ನು ಹಾಗೂ ಪೂರಕ ಆದೇಶಗಳ ಪ್ರತಿಗಳೊಂದಿಗೆ ಈ ಪತ್ರದೊಂದಿಗೆ ಲಗತ್ತಿಸಿದ್ದು, ಅದನ್ನು ಎಲ್ಲಾ ಘಟಕಗಳು, ಕಾರ್ಯಾಗಾರಗಳು, ವಿಭಾಗೀಯ ಕಛೇರಿಗಳು ಮತ್ತು ಬಸ್ ನಿಲ್ದಾಣಗಳ ಸೂಚನಾ ಫಲಕದಲ್ಲಿ ತಪ್ಪದೆ ಪ್ರಕಟಿಸಿ, ಎಲ್ಲಾ ನೌಕರರ ಗಮನಕ್ಕೆ ತರಲು ಸೂಚಿಸಲಾಗಿದೆ.

ಅಲ್ಲದೇ, ಈ ಕುರಿತು ನೌಕರರನ್ನು ಉದ್ದೇಶಿಸಿ ಅವರಿಗೆ ಮನವರಿಕೆ ಮಾಡುವುದು. ಜೊತೆಗೆ, ಕೋವಿಡ್-19 ಸಾಂಕ್ರಾಮಿಕ ರೋಗದ ಪರಿಣಾಮದಿಂದಾಗಿ 2020ನೇ ಸಾಲಿನಲ್ಲಿ ರಸ್ತೆ ಸಾರಿಗೆ ನಿಗಮಗಳು ಅನುಭವಿಸಿರುವ ಆರ್ಥಿಕ ನಷ್ಟ ಮತ್ತು ನೌಕರರ ಸಂಬಳ ನೀಡಲು ಘನ ರಾಜ್ಯ ಸರ್ಕಾರವು ಅನುದಾನ ಮಂಜೂರು ಮಾಡಿರುವುದು, ಇತ್ಯಾದಿ ಅಂಶಗಳನ್ನು ಸಹ ನೌಕರರ ಗಮನಕ್ಕೆ ತರುವುದು.

ಮುಂದುವರೆದ ಪುಟ.............................
Continuation Sheet......................

ಅದೇ ರೀತಿ, ನಿಗಮಗಳ ಅನುಸೂಚಿಗಳ ಆಚರಣೆಯು ಇದೀಗ ಬಹುತೇಕ ಪ್ರಾರಂಭವಾಗಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಜನಸಾಮಾನ್ಯರ ಮತ್ತು ನಿಗಮದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ನಿಗಮದ ಪ್ರತಿಯೊಬ್ಬ ನೌಕರರು ಮತ್ತು ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕಾದ ಅನಿವಾರ್ಯತೆಯನ್ನು ಸಹ ಅವರ ಗಮನಕ್ಕೆ ತರುವುದು.

ಈ ಕುರಿತು ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ತಪ್ಪದೇ ಕಳುಹಿಸುವುದು.

ಅಡಕ:ಪತ್ರದಲ್ಲಿರುವಂತೆ.

(ಶಿವಯೋಗಿ ಸಿ.ಕಳಸದ, ಭಾ.ಆ.ಸೇ.)
ವ್ಯವಸ್ಥಾಪಕ ನಿರ್ದೇಶಕರು
ಕರಾರಸಾನಿಗಮ